ಕರ್ನಾಟಕ ವಿಧಾನ ಪರಿಷತ್ತು	
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1036 (1288)
ಸದಸ್ಯರ ಹೆಸರು:	ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ:	15.03.2021
ಉತ್ತರಿಸುವವರು:	ಮಾನ್ಯ ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಸೇವೆಯಲ್ಲಿರುವ ನೌಕರರು ಸ್ಥಳೀಯ ವೃಂದ ಸೇರಲು ನಿಯಮಾನುಸಾರ ನೀಡಬೇಕಾದ ದಾಖಲೆಗಳು ಯಾವುವು; ಹಾಗೂ ಅರಣ್ಯ ಇಲಾಖೆಯಲ್ಲಿ ಸುಳ್ಳು ದಾಖಲೆ ನೀಡಿ ಸ್ಥಳೀಯ ವೃಂದ ಸೇರಿರುವ ಬಗ್ಗೆ ದೂರುಗಳು ಬಂದಿದೆಯೇ; ದೂರುಗಳು ಬಂದಿದ್ದರೆ, ಯಾವ ಯಾವ ಹಂತದಲ್ಲಿದೆ;	ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು, 2013 ರ ನಿಯಮ 3(2) ರಲ್ಲಿ ತಿಳಿಸಿರುವಂತೆ ಸರ್ಕಾರಿ ನೌಕರರ ಸ್ಥಳೀಯ ವೃಂದ ಸೇರಲು ನೀಡಬೇಕಾದ ದಾಖಲೆಗಳ ವಿವರ ಈ ಕೆಳಕಂಡಂತಿದೆ. (ಎ) ಜನನ ಪ್ರಮಾಣ ಪತ್ರ, ಅಥವಾ (ಬಿ) ವಾಸಸ್ಥಳ ಪ್ರಮಾಣ ಪತ್ರ, ಅಥವಾ (ಸಿ) ವ್ಯಾಸಂಗ ಪ್ರಮಾಣ ಪತ್ರ, ಅಥವಾ (ಡಿ) ವಿವಾಹ ಪ್ರಮಾಣ ಪತ್ರ, ಅಥವಾ (ಇ) ಸ್ವಗ್ರಾಮ (ಅಥವಾ ಸ್ಥಳ) ಪ್ರಮಾಣ ಪತ್ರ, ಅಥವಾ (ಎಫ್) ವಾರಸ ಪ್ರಮಾಣ ಪತ್ರ; ಅಥವಾ (ಜಿ) ಈ ಮೇಲಿನ ಪ್ರಮಾಣ ಪತ್ರಗಳ ಒಂದು ಅಥವಾ ಹೆಚ್ಚಿನ ಸಂಯೋಜನೆ ಸ್ಥಳೀಯ ವೃಂದ ಸೇರಿರುವ ಬಗ್ಗೆ ದೂರುಗಳ ಸ್ವೀಕೃತವಾಗಿದ್ದು, ಅವುಗಳು ಪರಿಶೀಲನಾ ಹಂತದಲ್ಲಿರುತ್ತವೆ.
ಆ)	ಅರಣ್ಯ ಇಲಾಖೆಯಲ್ಲಿ 371J ಅಡಿಯಲ್ಲಿ ಅನುಬಂಧ–B ಯಲ್ಲಿ ವಾಸಸ್ಥಳ ಪ್ರಮಾಣಪತ್ರ ನೀಡಿ ಸ್ಥಳೀಯ ವೃಂದಕ್ಕೆ ಸ್ಥಳೀಯರಲ್ಲದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸೇರಿ ಬಡ್ತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;	ಈ ಕುರಿತು ದೂರುಗಳು ಸ್ವೀಕೃತವಾಗಿದ್ದು, ಸದರಿ ದೂರುಗಳು ಪರಿಶೀಲನಾ ಹಂತದಲ್ಲಿರುತ್ತವೆ. ಪರಿಶೀಲನಾ ವರದಿ ಆಧಾರದ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.
ಇ)	ಸುಳ್ಳು ದಾಖಲೆ ನೀಡಿ ಸರ್ಕಾರಿ ಸೇವೆಯಲ್ಲಿ ಬಡ್ತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು?	

ಅಪಜೀ 75 ಅಪಸೇ 2021 (ಇ)

(ಅರವಿಂದ ಲಿಂಬಾವಳಿ)
ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು